ಬಂದಿತ್ತು. ಕುರಿ ಮೇಯಿಸುತ್ತಿದ್ದ ಮೂಲಿಮನಿ ಬಸಮ್ಮ, ಮತ್ತವಳ ಹತ್ತು ಕುರಿಗಳು ಸಿಡಿಲಿಗೆ ಸತ್ತವು. ಅಪ್ಪ ಹೊಲದಲ್ಲೆ ಸತ್ತು ಬಿದ್ದಿದ್ದ. ಆವತ್ತಿನಂತೆ ಇದು ಅಪ್ಪ ಕಳಿಸಿದ ಸುಳ್ಳು ಸುದ್ದಿಯಾಗಲಿ ಅಂತ ಬಯಸಿದ್ದು ನಿಜವಾಗಲಿಲ್ಲ. ಅಪ್ಪನನ್ನು ಹೊಲದಲ್ಲೆ ಮಣ್ಣು ಮಾಡಿದೆವು. 'ಪದಮೂ, ಬಾ. ಅವೆರಡ್ನು ಕರಿ, ಉಣಾರಂತ್ರಿ. ರಾತ್ರಿ ಭಾಳಾತು' ಹೊರಗಿನ ಕತ್ತಲಲ್ಲಿ ಕರಗಿದ್ದ ಮನಸು ಅವ್ವನ ಕರೆಯಿಂದ ಇತ್ತ ಬಂದು ಇಂಗಿತವಾಗಿ ತಂಗಿಯರತ್ತ ನೋಡಿ ಒಳಕ್ಕೆ ನಡೆದಳು.

'ಪದಮ ಬ್ಯಾಳಿ ಬಿಸಿಯಾತ ನೋಡು... ತೆಕ್ಕೋ' ಅಂದವಳು ಪಕ್ಕದಲ್ಲಿದ್ದ ಹಿಟ್ಟಿನ ಚೀಲ ಹಿಂಗೈಲೆ ಚಕ್ಕನೆ ಮರೆಗೆ ಸರಿಸಿದಳು. ಮಕ್ಕಳೆಲ್ಲ ಚಿಕ್ಕವು; ಹೀಗೇ ಊಟಕ್ಕೆ ಕೂತಿದ್ದವು. ಅಡತಿ ಸಾವ್ಕಾರ ಮೂಗಣ್ಣಪ್ಪ ಬರಲಿಕ್ಕೆ ಕರೆ ಕಳಿಸಿದಾಗ ಏನೋ ಇರಬಹುದು ಅಂತ ಕಾಶವ್ವಗೆ ಹೆದರಿಕೆಯಾಯಿತು. ಯಾವುದೋ ಕಾಗದವನ್ನು ಕೈಯಿಂದ ಸವರುತ್ತ, 'ಇದನಿಟಗೊಂಡು ನಾ ಏನ್ಮಾಡಲಿ?' ಅಂತ ಮೆತ್ತಗೆ ಪ್ರಶ್ನೆ ಎಸೆದಿದ್ದ. ಚಂದಪ್ಪ ಸತ್ತಾಗ ಬರಿಯ ಯಜಮಾನನಷ್ಟೆ ಹೋಗಲಿಲ್ಲ. ಕಾಶವ್ವನ ಪಾದದಡಿಯ ಎಲ್ಲವೂ ಕುಸಿದಿದ್ದವು. ಹಿಂದಿನ ಸುಗ್ಗಿಯ ಅನಂತರ ಚಂದಪ್ಪ ಹೊಲದಮೇಲೆ ಮಾಡಿದ ಸಾಲವಿತ್ತು. ಅವನ ಸಾವಿನ ಆಘಾತಕ್ಕೆ ಆ ವರ್ಷ ಬೇಸಾಯ ಮಾಡಿಸಲಾಗಲಿಲ್ಲ. ಅವಳಿಗೆ ಯಜಮಾನಿಕೆಯ ಅನುಭವ ಇರಲಿಲ್ಲ. ಮತ್ತಷ್ಟು ಸಾಲವಾಗಿತ್ತು. ಅಡತಿ ಸಾವುಕಾರ ಜಮೀನು ಹೆಸರಿಗೆ ಮಾಡಿಕೊಂಡು, 'ಹಾಂಗ ಕೇಳೀದ್ರ ಸಾಲ ಜಾಸ್ತೀನ ಅದಾ. ಆದ್ರ ನೀವು ಹೆಣಮಕ್ಕಳದೀರಿ; ದೇವ್ರು ಮೆಚ್ಬೇಕಲ್ಲವಾ, ನನ್ ಕೈಯಿಂದ ಇದ್ನ ಕೊಡ್ತಿದೀನವ್ವ...' ಅಂತ ಒಂದಿಷ್ಟು ನೋಟು ಕೈಯಲ್ಲಿ ಹಿಡಿಸಿ ಅತ್ತ ತಿರುಗಿಕೊಂಡಿದ್ದ. ಕಾಶವ್ವ ಅವರಿವರ ಮನೆ ಕೆಲಸಕ್ಕೂ ಹೊಲದ ಕೂಲಿಗೂ ಹೋಗುತ್ತಿದ್ದಳು. ಈಸ್ವರಪ್ಪನ ಖಾನಾವಳಿಯಲ್ಲಿ ರೊಟ್ಟಿ ತಟ್ಟಲು ಎರಡು ಹೊತ್ತು ಹೋಗುತ್ತಿದ್ದಳು. ಅವಳೂಟವಲ್ಲದೆ ಮನೆಗೆ ಹತ್ತು ರೊಟ್ಟಿ ಸಿಗುತ್ತಿತ್ತು. ಹೇಗೊ ಸಾಗುತ್ತಿತ್ತು. ಮನೆಲ್ಲಿ ಸಣ್ಣ ಸಣ್ಣ ಮಕ್ಕಳು ಹೊಲದ ಕೆಲಸ ಅಂತ ಚಂದಪ್ಪ ಪದ್ಮಾವತಿಯನ್ನ ಮೂರನೆ ಕ್ಲಾಸಿಗೇ ಬಿಡಿಸಿಬಿಟ್ಟಿದ್ದ. ಶಹಾಬಾದಿನ ಸ್ಟೇಶನ್ ರೋಡಿನ ರಾಜಸ್ತಾನೀ ಫ್ಯಾಶನ್ ಶಾಪಿನಲ್ಲಿ ಸೇಲ್ಸ್‌ಗರ್ಲ್ ಆಗಿ ಸೇರಿಕೊಂಡಳು. ಗಿರಾಕಿಯಿಲ್ಲದಿದ್ದಾಗೂ ಮಾರ್ವಾಡಿ ನಿಂತಲ್ಲಿ ನಿಲ್ಲಗೊಡದೆ ಕೆಲಸ ತೆಗೆಯುತ್ತಿದ್ದ. ಆರಗಟಗಿಯಿಂದ ಒಳದಾರಿಯಲ್ಲಿ ಒಂದು ಕಿಲೋಮೀಟರು ನಡೆದು ಹೋದರೆ ಏಸಿಸಿ ಸಿಮೆಂಟ್ ಫ್ಯಾಕ್ಟರಿ ಗೇಟು ಸಿಗುತ್ತದೆ. ಅಲ್ಲಿಂದ ರೈಲ್ವೆ ಸ್ಟೇಶನ್ ಅನತಿ ದೂರದಲ್ಲಿ ಕಾಣುತ್ತದೆ. ಹಳಿಗುಂಟ ನಡೆದರೆ ಅಂಗಡಿ ಹತ್ತಿರ. ರಾತ್ರಿ ಅದು ನಿರ್ಜನ ಪ್ರದೇಶ. ಅವಳು ಬರಲು ತಡವಾದರೆ ಕಾಶವ್ವನ ಎದೆಬಡಿತ ಸ್ಥಿಮಿತದಲ್ಲಿರುವುದಿಲ್ಲ. ಆದರೆ, ಜೀವನ ನಿರ್ವಹಣೆಯಲ್ಲಿ ಹೊಟ್ಟೆಯ ಪಾತ್ರವೊಂದಿದೆಯಲ್ಲ. ತನ್ನ ಗಂಡ ಯಾವದೋ ಕವಿಯೊಬ್ಬರ ಹಾಡನ್ನು ಖುಷಿಯಲ್ಲಿದ್ದಾಗ ಗುನುಗುತ್ತಿರುತ್ತಿದ್ದ: ನಾಡಿಗೆ ಬಂತು ಶ್ರಾವಣಾ... ಕಾಡಿಗೆ ಬಂತು ಶ್ರಾವಣಾ... ತಾನೂ ಈಗ ಹಾಡಬೇಕು: ಯೌವ್ವನ ಬಂತು ಯೌವ್ವನಾ... ಇವಳಿಗೂ ಬಂತು ಯೌವ್ವನಾ; ಅವಳಿಗೂ ಬಂತು ಯೌವ್ವನಾ. ಹೆಣ್ಮಕ್ಕಳು ಬೆಳೆದಿದ್ದಕ್ಕೆ ಖುಷಿ ಪಡಬೇಕೋ ಗೊತ್ತಿಲ್ಲ. ತನ್ನಂತಹ ತಾಯಿಗೆ ಇದೇ ಆತಂಕವಾಗಿ ಕಾಡುತ್ತದೆ. ರೊಟ್ಟಿಯನ್ನು ಕೆಂಡದಿಂದ ಎತ್ತಿ ಬಟ್ಟಲಿಗೆ ಹಾಕುವ ನೆವದಲ್ಲಿ ಅತ್ತ ತಿರುಗಿ ಕಣ್ಣೊರೆಸಿಕೊಂಡಳು. 'ಕೊರೊನಾ ಈಗೀಗ ಕಮ್ಮಿ ಆಗ್ಯದ ಅಂತಾರ. ರೈಲೂ ಓಡಾಕತ್ತಾವ. ಮತ್ತ ರಾಜಸ್ತಾನೀ ಸಾವ್ಕಾರನ ದುಕಾನ ಸುರು ಆಗತದನು?' ಯೋಚನೆ ಬದಲಿಸಲು ಪ್ರಶ್ನೆ ಎಸೆದಳು. ಅವ್ವನ ಮನಸಲ್ಲಿ ಏನು ನಡೆಯುತ್ತಿದೆ ಅನ್ನುವುದು ಗೊತ್ತಾಗದ ಪದ್ಮಾವತಿ, 'ಸುರುವಾಗಿದ್ರ ಚಲೋ ಇತ್ತವಾ. ಎಷ್ಟ ದಿನಾ ಹಿಂಗಾ ಯಾಪಾರ ಕೆಲಸ ಇಲ್ದಾ ಜನಾ ಇರತಾರ? ಹೊಟ್ಟೆಗೇನು ತಿಂತಾರ?' ಅಂದಳು. ಅಂಗಡಿಯಲ್ಲಿ ಕೆಲಸ ಮಾಡುತ್ತಿರುವಾಗ ಅವಳ ಕೈಯಲ್ಲಿ ಸ್ವಲ್ಪ ಉಳಿಯುತ್ತಿತ್ತು. ಕಾಶವ್ವ ತರುವ ರೊಟ್ಟಿ, ಅವಳ ಕೂಲಿಗೆ ತನ್ನದೂ ಸ್ವಲ್ಪ ಸೇರಿ ಮನೆ ನಡೆಯುತ್ತಿತ್ತು. ಶುಭಾಳನ್ನೂ